# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಕೆಂಪೇಗೌಡನಗರ ಉಪವಿಭಾಗ,
ಬೃ.ಬೆಂ.ಮ.ಪಾಲಿಕೆ ಹೆಚ್. ಸಿದ್ದಯ್ಯ ರಸ್ತೆ, ಬೆಂಗಳೂರು

ಸಂಖ್ಯೆ:ಸ.ಇಂ/ವಾ-118/ವಾರ್ಡ್‌ಸಭೆ/2021-22 ದಿನಾಂಕ:19-02-2022

## ವಾರ್ಡ್ -118ರ ವಾರ್ಡ್ ಸಭೆಯ ನಡವಳಿ

ದಿನಾಂಕ:19-02-2022 ರಂದು ಕೆಂಪೇಗೌಡನಗರ ಉಪವಿಭಾಗ ವಾರ್ಡ್-118ರ ವಾರ್ಡ್ ಕಛೇರಿಯಲ್ಲಿ ಡಾ!!. ಚಂದ್ರಯ್ಯ.ಟಿ. ಉಪ ನಿರ್ದೇಶಕರು ಪಶುಪಾಲನೆ ವಾರ್ಡ್-118 ರ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿಗಳು.

ಹಾಜರಿದವರು:-

| ಕ್ರ ಸಂ. | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಡಾ!!. ಚಂದ್ರಯ್ಯ.ಟಿ. | ನೋಡಲ್ ಅಧಿಕಾರಿಗಳು | 9902041310 |
| 2 | ಶ್ರೀ.ಕೆ.ಎಸ್.ವಿಜಯ್‌ಕುಮಾರ್ | ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ:118 | 9480688118 |
| 3 | ಹೆಚ್.ಎನ್.ಸ್ವಾಮಿ | ಹೆಚ್.ಐ.ಓ | 8884224554 |
| 4 | ಡಾ!! ಅಶ್ವಿನಿ | ಆರೋಗ್ಯಾಧಿಕಾರಿ | 8762164340 |
| 5 | ಶ್ರೀ.ಆರ್.ವೀರಯ್ಯ | ಕಿರಿಯ ಆರೋಗ್ಯ ಪರಿವೀಕ್ಷಕರು | 9844859560 |
| 6 | ಶ್ರೀ.ಚಿಕ್ಕಣ್ಣ | ಬೆಸ್ಕಾಂ | 9449866110 |
| 7 | ಶ್ರೀ.ಸೀತರಾಮ | ಮೌಲ್ಯಮಾಲಕ | |
| | ಅನುರಾಧ | ಆರ್.ಐ | 9141945103 |
| 8 | ಶ್ರೀ.ಜಾಕ್ | ವಿನೋಭನಗರ ಸ್ಥಳೀಯರು | 9741912926 |
| 9 | ಶ್ರೀ.ಕುಮಾರ್ | ಸ್ಥಳೀಯರು | 8553957441 |
| 10 | ಶ್ರೀ.ವಿಶ್ವ.ಪಿ | ಸ್ಥಳೀಯರು | 8884347504 |
| 11 | ಅಪ್ಪು | ಸ್ಥಳೀಯರು | 6360057249 |
| 12 | ಆರವಿಂದ್ | ಸ್ಥಳೀಯರು | 9916265733 |
| 13 | ತಂಬಿ | ಸ್ಥಳೀಯರು | 8884348574 |
| 14 | ರಾಜೇಶ್ | ಸ್ಥಳೀಯರು | 9845603239 |
| 15 | ಶಿವ.ಎಂ | ಸ್ಥಳೀಯರು | 8971502714 |
| 16 | ರಮೇಶ್.ಎಂ. | ಸ್ಥಳೀಯರು | 9900494522 |
| 17 | ರವಿ | ಸ್ಥಳೀಯರು | 9901051478 |

ಮಾನ್ಯ ಅಧ್ಯಕ್ಷರು, ಮೇಲ್ಕಂಡ ಎಲ್ಲರನ್ನು ಸ್ವಾಗತದೊಂದಿಗೆ ಪರಸ್ಪರ ಪರಿಚಯ ಮಾಡಿಕೊಳ್ಳಲು ತಿಳಿಸುತ್ತಾ ಸಭೆಯನ್ನು ಪ್ರಾರಂಭಿಸಲಾಯಿತು.

ಚರ್ಚಿಸಲಾದ ವಿಷಯಗಳು:-

1. ಕಾಮಗಾರಿ ಇಲಾಖೆ:-

ಕಾಮಗಾರಿ ವಿಷಯವಾಗಿ ಚರ್ಚಿಸಲಾಗಿ ಶ್ರೀ.ರವಿ ಮಾತನಾಡಿ ಬೆಸ್ಕಾಂ ರವರು ಭೂಗತ ಕೇಬಲ್‌ಗಳನ್ನು ಅಳವಡಿಸಿದ್ದು, ರಸ್ತೆಯ ಮೇಲ್‌ಭಾಗದಿಂದ ಕೇವಲ 01 ಅಡಿ ಆಳದಲ್ಲಿ ಅಳವಡಿಸಿರುವುದರಿಂದ ಬೇರೆ ಕಾಮಗಾರಿಗಳು ನಿರ್ವಹಿಸುವಾಗಿ ತೊಂದರೆ ಉಂಟಾಗುತ್ತದೆ ಎಂದು ತಿಳಿಸಿರುತ್ತಾರೆ. ಹಾಗೂ ನಾಲಾ ರಸ್ತೆಯಲ್ಲಿ ರಸ್ತೆ ಮೂಲಭೂತ ಸೌಕರ್ಯ ರವರು ಕಾಮಗಾರಿ ನಿರ್ವಹಿಸುವ ಸಮಯದಲ್ಲಿ ಬೋರ್‌ವೆಲ್ ಮುಚ್ಚು ಹಾಕಿರುವುದಾಗಿ ತಿಳಿಸಿರುತ್ತಾರೆ.

2. ಘನತ್ಯಾಜ್ಯ ವಿಭಾಗ:-

ಘನತ್ಯಾಜ್ಯ ವಿಷಯವಾಗಿ ಶ್ರೀ.ಜಾಕ್ ರವರು ಸಭೆಯಲ್ಲಿ ಮತನಾಡಿ ವಿನೋಭನಗರ, ಸಿಮೆಂಟ್ ಹೆಟ್ಸ್ ಹಾಗೂ ಎಲ್ಲಾ ಸ್ಲಂಗಳಲ್ಲಿ ಕಸವನ್ನು ತೆಗೆಯಲು ಆಟೋಗಳು ಬರುತ್ತಿಲ್ಲ ಆದ ಕಾರಣ ಕಸದ ರಾಶಿಯು ರಸ್ತೆಯಲ್ಲಿ ಬಿದ್ದಿರುತ್ತದೆಂದು ಎಂದು ತಿಳಿಸಿರುತ್ತಾರೆ. ಈ ವಿಷಯವಾಗಿ ಶ್ರೀ.ವೀರಯ್ಯ ಕಿರಿಯ ಆರೋಗ್ಯ ಪರಿವೀಕ್ಷಕರು ಮತನಾಡಿ ಗುತ್ತಿಗೆದಾರರು ಧಾರಣಿ ಮಾಡುತ್ತಿರುವುದರಿಂದ ಆಟೋಗಳು ಬಂದಿರುವುದಿಲ್ಲ ಆಟೋಗಳು ಬಂದ ಕೂಡಲೇ ಕಸದ ರಾಶಿಯನ್ನು ತೆರವುಗೊಳಿಸಲಾಗುವುದು. ಮತ್ತು ಶ್ರೀ.ರವಿ ರವರು ಮಾತನಾಡಿ ಸಿದ್ದಯ್ಯ ರಸ್ತೆಯ ದರ್ಗದ ಎದುರಿನಲ್ಲಿ ಘನತ್ಯಾಜ್ಯ ವಿಭಾಗದಿಂದ ಕಸವನ್ನು ತೆಗೆದ ನಂತರ ಸ್ಥಳೀಯ ಅಂಗಡಿಯವರು ಕಸವನ್ನು ತಂದು ಹಾಕುತ್ತಿರುತ್ತಾರೆ ಎಂದು ತಿಳಿಸಿರುತ್ತಾರೆ.

3. ಆರೋಗ್ಯ ಇಲಾಖೆ

ಡಾ!!.ಅಶ್ವಿನಿರವರು ಮಾತನಾಡಿ, ಫೆಬ್ರವರಿ 27 ರಿಂದ 4 ದಿನಗಳ ಕಾಲ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿರುತ್ತದೆ ಎಂದು ತಿಳಿಸಿರುತ್ತಾರೆ ಹಾಗೂ ಎಲ್ಲಾ ಅಂಗನವಾಡಿಯಲ್ಲಿ Vaccanation, ಪಲ್ಸ್ ಪೋಲಿಯೋ ಲಸಿಕೆಗಳನ್ನು ಬೆಳಿಗ್ಗೆ 8.00 ಗಂಟೆಯಿಂದ ಸಂಜೆ 5.00 ಗಂಟೆಯವರಿಗೆ ನೀಡಲಾಗುವುದು ಎಂದು ತಿಳಿಸಿರುತ್ತಾರೆ. ಮುಂದುವರೆದು ಎರಡನೇ ಹಂತದ Vaccanation ನೀಡಲಾಗುತ್ತಿದ್ದು ಹಾಗೂ 60

ವರ್ಷಮೇಲ್ಪರಿಗೆ ಬೋಸ್ಟರ್ ಡೋಸ್‌ಅನ್ನು ಗಿರಿಯಮ್ಮ ಕೆಂಪಯ್ಯ ಆಸ್ಪತ್ರೆಯಲ್ಲಿ ನೀಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ರಫೆರಲ್ ಹೈಟಕ್ ಲ್ಯಾಬ್ ಇರುವುದರಿಂದ ಗರ್ಭಿಣಿ ಮಹಿಳೆಯರು ಆರೋಗ್ಯ ತಪಾಸಣೆಯನ್ನು ಮಾಡಿಕೊಳ್ಳಬಹುದಾಗಿರುತ್ತದೆ ಎಂದು ತಿಳಿಸಿರುತ್ತಾರೆ.

4. ಪೊಲೀಸ್ ಇಲಾಖೆ

ಹೆಚ್.ಸಿದ್ದಯ್ಯರಸ್ತೆಯಲ್ಲಿರುವ Spring ಹೋಟೆಲ್ ಬಳಿ ರಸ್ತೆ ಉಬ್ಬುಗಳನ್ನು ಅಳವಡಿಸಬೇಕೆಂದು ಕೋರಿರುತ್ತಾರೆ. ಹಾಗೂ ರೆಫರಲ್ ಆಸ್ಪತ್ರೆಯ ರಸ್ತೆಯಲ್ಲಿ ಅನಧಿಕೃತವಾಗಿ ವಾಹನಗಳನ್ನು ನಿಲ್ಲಿಸಿರುತ್ತಾರೆ. ಆದ ಕಾರಣ ಆಸ್ಪತ್ರೆಯ ಅಂಬ್ಯುಲೆನ್ಸ್ ಓಡಾಡಲು ತುಂಬಾ ತೊಂದರೆ ಉಂಟಾಗಿರುತ್ತದೆ. ಆದ್ದರಿಂದ ಈ ರಸ್ತೆ ಹಾಗೂ ಸುತ್ತಮುತ್ತಲಿನ ರಸ್ತೆಯಲ್ಲಿ ನಿಲ್ಲಿಸಿರುವ ವಾಹನಗಳಿಗೆ ದಂಡ ವಿಧಿಸಿ ತೆರವುಗೊಳಿಸಬೇಕೆಂದು ಸಭೆಯಲ್ಲಿ ಕೋರಿರುತ್ತಾರೆ.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಮುಂದಿನ ಸಭೆಗೆ ಕಡ್ಡಾಯವಾಗಿ ಎಲ್ಲಾ ಅಧಿಕಾರಿಗಳಿಗೆ ವಾರ್ಡ್ ಸಮಿತಿ ಸಭೆಗೆ ಸಮಯಕ್ಕೆ ಸರಿಯಾಗಿ ಹಾಜರಾಗುವಂತೆ ಸೂಚಿಸಿರುತ್ತಾರೆ, ಹಾಜರಿದ್ದ ಅಧಿಕಾರಿಗಳಿಗೆ ಸಮನ್ವಯ ಸಾಧಿಸಿಕೊಂಡು ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಸಹಕಾರ ನೀಡುವಂತೆ ಕೋರುತ್ತಾ, ಸಭೆಗೆ ಹಾಜರಿದ್ದ ಎಲ್ಲಾರಿಗೂ ವಂದನೆಗಳನ್ನು ಅರ್ಪಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು ಹಾಗೂ
ಸಹಾಯಕ ಅಭಿಯಂತರರು
ವಾರ್ಡ್ –118 ಸುಧಾಮನಗರ

ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 118